# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸದಸ್ಯರ ಸಮಿತಿ ವಾರ್ಡ್ ಸಂಖ್ಯೆ: 89- ಜೋಗುಪಾಳ್ಯ ನಡೆದ ಸಮೀಪಿಕರಣ(ZOOM) ದಿನಾಂಕ: 20-07-2021 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/ 2020-21/21-09-2020 ರ ಆದೇಶದಂತೆ ದಿನಾಂಕ: 20-07-2021 ರಂದು ನಡೆದ ಸಮೀಪಿಕರಣ(ZOOM) ವಾರ್ಡ್ ಸಮಿತಿ ಸಭೆಯ ನಡವಳಿಗಳು,

**ಸಭೆಗೆ ಹಾಜರಿದ್ದವರ ವಿವರಗಳು**

1) ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ, ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ),
2) ಶ್ರೀ ಮೂರ್ತಿ ಸಹಾಯಕ ಅಭಿಯಂತರರು ಬಿಬಿಎಂಪಿ ಹಾಗೂ ಶ್ರೀಕಾಂತ್ ಕಿರಿಯ ಆರೋಗ್ಯ ಪರಿವೀಕ್ಷಕರು ಹಾಜರಿದ್ದರು.
3) ವಾರ್ಡ್ ಸಮಿತಿ ಸದಸ್ಯರಾದ, ಶ್ರೀ.ಆಶಾ, ಅಲ್ವಿನ್, ಶ್ರೀ, ಉಮೇಶ್, ಹಾಗೂ ಶ್ರದ್ಧ, ಹೇಮಂತ್ ನಾಗ್ ಸಿಂದೂಜಾ ಅಯ್ಯಂಗಾರ್ ರವರು ಸಮೀಪಿಕರಣ (ZOOM) ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಹಾಜರಿದ್ದ ಅಧಿಕಾರಿಗಳನ್ನು ಹಾಗೂ ವಾರ್ಡ್ ಸಮೀತಿ ಸದಸ್ಯರು, ಅಹ್ವಾನಿತರಾಗಿದ್ದ ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

**ವಾರ್ಡ್ ಸದಸ್ಯರ ಸಮೀತಿ ಸಭೆಯಲ್ಲಿ ಚರ್ಚಿಸಿದಂತಹ ವಿಷಯಗಳು ;-**

1) ಮೋದಲನೆದಾಗಿ ವಾರ್ಡ್ ಸಮೀತಿ ಸದಸ್ಯರಾದ ಉಮೇಶ್ ರವರು ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀಕಾಂತ್ ರವರಿಗೆ ವಾರ್ಡಿನಲ್ಲಿ ಮನೆಮನೆಗೆ ಕಸವನ್ನು ತೆಗೆದುಕೊಂಡು ಹೋಗುವ ಆಟೋಗಳು ದಿನನಿತ್ಯ ಹಾಗೂ ಸರಿಯಾಗಿ ಬರುತ್ತಿಲ್ಲವೆಂದು ಕೇಳಿದರು ಇದಕ್ಕೆ ಉತ್ತರಿಸುತ್ತಾ ಕಿರಿಯ ಆರೋಗ್ಯ ಪರಿವೀಕ್ಷಕರು ಇನ್ನೂ ಮುಂದೆ ಇದನ್ನು ಸರಿಪಡಿಸುವುದಾಗಿ ಹೇಳಿದರು.

2) ನೊಡಲ್ ಅಧಿಕಾರಿಯವರು ಇಂದಿರಾನಗರ 10ನೇ ಮುಖ್ಯೆ ರಸ್ತೆ ಹಾಗೂ ಇಲ್ತೆತೋಪು ರಸ್ತೆಗಳಲ್ಲಿ ಡಾಂಬರಿಕರಣ ಇನ್ನೂ ಆಗಿಲ್ಲವೆಂದು ಮೂರ್ತಿ ಸಹಾಯಕ ಅಭಿಯಂತರರು ರವರಿಗೆ ಯಾವಾಗ ಆಗುವುದೆಂದು ಕೇಳಿದರು ಇದಕ್ಕೆ ಸಹಾಯಕ ಅಭಿಯಂತರರು ಉತ್ತರಿಸುತ್ತಾ ಇನ್ನೂ ಹದಿನೈದು ದಿನಗಳಲ್ಲಿ ಡಾಂಬರಿಕರಣ ಮಾಡುವುದೆಂದು ಹಾಗೂ ಈಗ ಮಳೆಯಗಾಲವಾಗಿರುವುದರಿಂದ ತಡವಾಗುತ್ತಿದೆ ಎಂದು ಹೇಳಿದರು.

೩) ವಾರ್ಡಿನ ಸಾರ್ವಜನಿಕರಿಗೆ ವ್ಯಾಕ್ಸಿನೇಷನ್ ನೀಡುವ ಬಗ್ಗೆ ಈ ಕೆಳಕಂಡಂತೆ ಚರ್ಚಿಸಲಾಯಿತು.

a) ಸಾರ್ವಜನಿಕರಿಗೆ ವ್ಯಾಕ್ಸಿನ್ ಬಗ್ಗೆ ಅರಿವುಮೂಡಿಸುವ ಸಲುವಾಗಿ ಆಟೋ ಹಾಗೂ ಇತರ ಮಾಧ್ಯಮಗಳಲ್ಲಿ ಪ್ರಚಾರ ಪಡಿಸುವುದು.

b) ವಾರ್ಡಿನಲ್ಲಿ ಮೊಬೈಲ್ ವ್ಯಾಕ್ಸಿನೇಷನ್ ನಡೆಸುವ ಬಗ್ಗೆ ಚರ್ಚಿಸಲಾಯಿತು.

c) ವಾರ್ಡಿನ ಸ್ಲಂನಲ್ಲಿರುವ ಸಾರ್ವಜನಿಕರಿಗೆ ವ್ಯಾಕ್ಸಿನೇಷನ್ ಬಗ್ಗೆ ಅರಿವುಮೂಡಿಸಿ ಹೆಚ್ಚು ಹೆಚ್ಚು ವ್ಯಾಕ್ಸಿನೇಷನ್ ಸಾರ್ವಜನಿಕರಿಗೆ ನಿಡುವ ಬಗ್ಗೆ ಚರ್ಚಿಸಲಾಯಿತು.

d) ವಾರ್ಡಿಗೆ ಕೇಂದ್ರ ಸ್ಥಳದಿಂದ ಹೆಚ್ಚು ವ್ಯಾಕ್ಸಿನೇಷನ್ ತರಿಸಿಕೊಳ್ಳುವ ಬಗ್ಗೆ.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಆಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಸೂಚಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

**ನೊಡೆಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ–89– ಜೋಗುಪಾಳ್ಯ**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು,**

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ